ಕರ್ನಾಟಕ ಸರ್ಕಾರ

# ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮ

ನಂ. 5/19, 4ನೇ ಮಹಡಿ. ಒಬ್ಲಾಂಗ್ ಬ್ಲಾಕ್, ಯುನಿಟಿ ಬಿಲ್ಡಿಂಗ್, ಮಿಷನ್ ರಸ್ತೆ, ಬೆಂಗಳೂರು – 560027

---

**ಸಂ: ಕ.ಕ್ರಿ.ಸ.ಅ.ನಿ/ಜಿಲ್ಲಾ ಕಛೇರಿ/ಸಿಆರ್-03/2025-26** **ದಿ: 25-11-2025**

## ಸುತ್ತೋಲೆ - 4

**ವಿಷಯ:-** ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದ ವಿವಿಧ ಸಾಲ ಹಾಗೂ ಸಹಾಯಧನ ಯೋಜನೆಗಳಿಗೆ ಆನ್‌ಲೈನ್ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕ ವಿಸ್ತರಣೆ ಮಾಡಿರುವ ಕುರಿತು.

*******

ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ಸಾಲ ಮತ್ತು ಸಹಾಯಧನ ಯೋಜನೆಗಳನ್ನು ಕ್ರಿಶ್ಚಿಯನ್ ಸಮುದಾಯದ ಹೆಚ್ಚಿನ ಅರ್ಹ ಫಲಾನುಭವಿಗಳು ಲಾಭ ಪಡೆಯಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಆನ್‌ಲೈನ್ ಅರ್ಜಿ ಸಲ್ಲಿಕೆಯ ಅಂತಿಮ ದಿನಾಂಕವನ್ನು **30ನೇ ನವೆಂಬರ್, 2025 ರಿಂದ 15ನೇ ಡಿಸೆಂಬರ್, 2025ರವರೆಗೆ** ವಿಸ್ತರಿಸಲಾಗಿದೆ. ಈ ಹಿನ್ನೆಲೆಯಲ್ಲಿ, ಎಲ್ಲಾ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರು, ಕೆಳಕಂಡಂತೆ ಕೂಡಲೆ ಕ್ರಮ ಕೈಗೊಳ್ಳುವುದು:

1. ವಿಸ್ತರಿಸಿದ ಅಂತಿಮ ದಿನಾಂಕದ ಕುರಿತು ವ್ಯಾಪಕ ಪ್ರಚಾರ ನೀಡುವುದು, ಇದಕ್ಕಾಗಿ:
   - ಜಿಲ್ಲಾ ಮಟ್ಟದ ಪತ್ರಿಕೆಗಳು, ಸ್ಥಳೀಯ ಸುದ್ದಿ ಪತ್ರಿಕೆಗಳು
   - ಕ್ರಿಶ್ಚಿಯನ್ ಮಾಸಪತ್ರಿಕೆಗಳು, ಬುಲೆಟಿನ್‌ಗಳು
   - ಸಾಮಾಜಿಕ ಜಾಲತಾಣಗಳು, ವಾಟ್ಸಾಪ್ ಗುಂಪುಗಳು
   - ಚರ್ಚ್ ಪ್ರಕಟಣೆಗಳು ಮತ್ತು ಸಮುದಾಯ ಜಾಲಗಳು ಹಾಗೂ
   - ಎಲ್ಲಾ ಚರ್ಚ್‌ಗಳ ಹಾಗೂ ಸಮುದಾಯ ಕೇಂದ್ರಗಳ ಸೂಚನಾ ಫಲಕಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು.
2. ಎಲ್ಲಾ ಕ್ರಿಶ್ಚಿಯನ್ ಮತಪಂಥಗಳ ಧರ್ಮಾಧ್ಯಕ್ಷರು/ಪಾದ್ರಿಗಳು ಮತ್ತು ಸಮುದಾಯದ ಜಿಲ್ಲಾ ಮಟ್ಟದ ಸಂಘಟನೆಗಳಿಗೆ ಈ ಮಾಹಿತಿಯನ್ನು ತಲುಪುವಂತೆ ಕ್ರಮ ಕೈಗೊಳ್ಳುವುದು.
3. ಈ ಹಿಂದೆ ನೀಡಿರುವ ಮೂರು ಸುತ್ತೋಲೆಗಳಲ್ಲಿನ ಸೂಚನೆಗಳ ಪ್ರಕಾರ ಪ್ರಚಾರ ಮತ್ತು ಅರಿವು ಮೂಡಿಸುವ ಕಾರ್ಯಗಳನ್ನು ಮುಂದುವರಿಸಿ, ತೀವ್ರಗೊಳಿಸುವುದು, ಇದರಲ್ಲಿ

- ಫಲಾನುಭವಿಗಳ ಮಾರ್ಗದರ್ಶನ ಶಿಬಿರಗಳು
- ಚರ್ಚ್ ಸಮಿತಿಗಳೊಂದಿಗೆ ಸಭೆಗಳು
- ಪೋಸ್ಟರ್‌ಗಳು/ಹ್ಯಾಂಡ್‌ಔಟ್‌ಗಳ ವಿತರಣೆ ಹಾಗೂ
- ಇತರೆ ಅರಿವು ಮೂಡಿಸುವ ಅಭಿಯಾನಗಳನ್ನು ಕೈಗೊಳ್ಳುವುದು.

4. ನಿಗಮದಿಂದ ಜಿಲ್ಲೆಗಳಿಗೆ ಕಳುಹಿಸಲಾಗಿರುವ ಪೋಸ್ಟರ್‌ಗಳು ಹಾಗೂ ಫ್ಲೈಯರ್‌ಗಳನ್ನು ತಕ್ಷಣವೇ ಎಲ್ಲಾ ಮತಪಂಥಗಳ ಚರ್ಚ್‌ಗಳಿಗೆ ಮತ್ತು ಸಮುದಾಯದ ಸಂಘಟನೆಗಳಿಗೆ ವಿತರಿಸುವುದು.

5. ಎಲ್ಲಾ ಫಲಾನುಭವಿಗಳಿಗೆ ಅರ್ಜಿ ತುಂಬುವಲ್ಲಿ ಸಂಪೂರ್ಣ ಮಾರ್ಗದರ್ಶನ ಮತ್ತು ಸಹಕಾರ ನೀಡುವುದು.

6. ಪ್ರಚಾರ ಹಾಗೂ ಫಲಾನುಭವಿಗಳ ಸಂಪರ್ಕ ಕಾರ್ಯಗಳ ಬಗ್ಗೆ ದೈನಂದಿನ ಪ್ರಗತಿ ವರದಿಯನ್ನು ತಯಾರಿಸಿ ನಿಗಮದ ಕೇಂದ್ರ ಕಛೇರಿಗೆ ಕಳುಹಿಸುವುದು.

ನಿಗಮದ ಯೋಜನೆಗಳ ಬಗ್ಗೆ ಫಲಾನುಭವಿಗಳಿಗೆ ಸಂಪೂರ್ಣವಾಗಿ ಮಾಹಿತಿ ತಲುಪುವಂತೆ ಹಾಗೂ ವಿಸ್ತರಿಸಿದ ಅಂತಿಮ ದಿನಾಂಕದೊಳಗೆ ಗರಿಷ್ಠ ಅರ್ಜಿಗಳು ಸಲ್ಲಿಕೆಯಾಗುವಂತೆ ಈ ಕಾರ್ಯವನ್ನು ಆದ್ಯತೆ ಮೇಲೆ ಕೈಗೊಳ್ಳುವುದು.

**ವ್ಯವಸ್ಥಾಪಕ ನಿರ್ದೇಶಕರು,**
**ಕರ್ನಾಟಕ ಕ್ರಿಶ್ಚಿಯನ್ ಸಮುದಾಯ**
**ಅಭಿವೃದ್ಧಿ ನಿಗಮ, ಬೆಂಗಳೂರು.**

**ಇವರಿಗೆ:**

ಎಲ್ಲಾ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (KMDC).

**ಪ್ರತಿಯನ್ನು:**

1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (KMDC) – ಮಾಹಿತಿಗಾಗಿ ಹಾಗೂ ಸೂಕ್ತ ನಿರ್ದೇಶನ ನೀಡಲು ಕೋರಿದೆ.
2. ಕಛೇರಿ ಪ್ರತಿ.